ಸಲ್ಲುವುದಕ್ಕೂ ಎಲ್ಲವನ್ನು ಒಳಗೊಂಡೂ ತನ್ನ ಅನನ್ಯತೆಯನ್ನು ಕಾಪಾಡಿಕೊಳ್ಳುವುದಕ್ಕೂ ಸಾಕಷ್ಟು ಅಂತರವಿದೆ. ಬೇಂದ್ರೆಯವರು ಆರಂಭದಲ್ಲಿ ಗುರ್ತಿಸಿದ 'ಜೀವಂತ ಗತಿ' ಮುಂದೆ ಕಣವಿಯವರ ಕಾವ್ಯಪಥವಾಯಿತು. ಕಣವಿಯವರೇ ಹೇಳುವ ಹಾಗೆ 'ರೂಢಿಯಾಗಿದೆ ಒಬ್ಬೊಬ್ಬರಿಗೂ ಒಂದೊಂದು ಬಗೆಯ ನಡಿಗೆ / ಮುಖ್ಯ ಬೇಕಾದದ್ದು ಜೀವಂತ ಗತಿ, ಹೊಸ ನೆತ್ತರಿನ ಕೊಡುಗೆ'.

ಕಣವಿಯವರ ಆರಂಭದ ಕವಿತೆಗಳು ನವೋದಯದ ದಟ್ಟ ಪ್ರಭಾವದಿಂದ ರೂಪುಗೊಂಡ ರಚನೆಗಳು. ನಿಸರ್ಗಪ್ರೀತಿ, ಮಹತ್ತಾದುದರ ಬಗೆಗೆ ತುಡಿತ, ಆದರ್ಶದ ಸೆಳೆತ ಇವೆಲ್ಲ ಇಲ್ಲಿ ಗಟ್ಟಿದನಿಯಲ್ಲಿಯೇ ಪ್ರಕಟವಾಗುತ್ತವೆ. ಮಧುರಚೆನ್ನ ಆ ಕಾಲಕ್ಕೆ ಕಣವಿಯವರಿಗೆ ಪ್ರಿಯರಾಗಿದ್ದ ಕವಿ. 'ಗಾಳಿಗೂಡಿ ಕಿರುಮೋಡವಾಗಿ ಬಾನೆಲ್ಲ ಅಲೆಯುವಾಸೆ / ಬಾನದೇಗುಲದಿ ನಮ್ರವಾಗಿ ಮೈದುಂಬಿ ನಿಲ್ಲುವಾಸೆ / ಮಳೆಯಬಿಲ್ಲ ಮೈದೊಡವ ಧರಿಸಿ ಮಣಿಹನಿಗಳಾಗುವಾಸೆ / ಚಂದ್ರನೆದೆಯ ತಿಳಿಯೊಲವನುಂಡು ಶ್ರೀ ಕಾಂತಿ ಪಡೆಯುವಾಸೆ'. (ಮೇಘೋಪಾಸನೆ) ಭಾವಪ್ರಧಾನವಾದ ಇಂತಹ ರಚನೆಗಳು ಆರಂಭದಲ್ಲಿ ಹೇರಳವಾಗಿ ಕಂಡರೂ ಇಂಥಲ್ಲಿಯೂ ಕಣವಿಯವರ ಕಾವ್ಯ ಮುಂದೆ ಹಿಡಿವ ಹಾದಿಯ ಬಗ್ಗೆ ಕೆಲವು ಸೂಚನೆಗಳು ಸಿಗುತ್ತವೆ. 1953ರಲ್ಲಿ ಪ್ರಕಟವಾದ 'ಆಕಾಶಬುಟ್ಟಿ' ಈ ಹಿನ್ನೆಲೆಯಲ್ಲಿ ಕಣವಿಯವರ ಕಾವ್ಯಮಜಲಿನ ಒಂದು ಮುಖ್ಯ ಘಟ್ಟ. ಮುಂದೆ 'ಕಣವಿತನದ ಕವಿತೆಗಳು' ಎಂದು ನಾವು ಹೇಳಬಹುದಾದ ರೀತಿಯ ಕವಿತೆಗಳ ಹೊಳಹುಗಳು ಇಲ್ಲಿ ಸ್ಪಷ್ಟವಾಗಿ ಕಾಣಿಸುತ್ತವೆ. 'ದೀನ ಮಾನವ ರಚಿತ ಆಕಾಶಬುಟ್ಟಿ / ದಾನವರ ಬಿರುಗಾಳಿ ದಾಳಿಯನು ಮೆಟ್ಟಿ / ಬಾನವರನಪ್ಪಿ ಒಂದಾಗಿಹುದು ನೋಡು / ನೋಡಿದೆಯ ಕವಿಯೆ? / ಊರ್ಧ್ವಮುಖಿಗಲ್ಲದಿದು ಉಳಿದವರಿಗಳವೆ? / ಆತ್ಮಬಲದೆದುರು ಮೇಣುಳಿದ ಬಲವೇ? / ಆಕಾಶಬುಟ್ಟಿಯೊಲು ಏಕಾಕಿಯಾದರೂ / ಎದೆಗೆದೆಯ ಹೊಂದೀಪ ಉದ್ದೀಪನಂಗೊಂಡು / ಬಾಳ ದ್ವೀಪವ ಬೆಳಗುವಂತೆ ಹಾಡು / ಎಂದೆಂದು ನೀನಿಂಥ ಹಾಡ ಹಾಡು!' (ಆಕಾಶಬುಟ್ಟಿ).

ಏಕಾಂಗಿಯಾದರೂ ಅಡ್ಡಿಯಿಲ್ಲ, ಆತ್ಮಬಲ ಬೆಳೆಸಿಕೊಂಡು ತನ್ನದೇ ಹಾದಿಯಲ್ಲಿ ಮುನ್ನುಗ್ಗಬೇಕೆಂಬ ಅಭೀಪ್ಸೆ ಕಣವಿಯವರ ಕಾವ್ಯ ವಿನ್ಯಾಸವನ್ನು ರೂಪಿಸಿದೆ. ಮಾತ್ರವಲ್ಲ, ಇದನ್ನು ಮನದುಂಬಿ ಹಾಡಬೇಕೆನ್ನುವ ಜೀವನೋತ್ಸಾಹದ ಲಯವೂ ಅವರ ಕಾವ್ಯನಡಿಗೆಯಲ್ಲಿ ಸಹಜವೆಂಬಂತೆ ಸೇರಿಕೊಂಡಿದೆ. 'ವ್ಯಕ್ತಿ ಶಕ್ತಿಯ ಗುಣವಿಕಾಸ ಪ್ರಕಾಶದಲಿ / ಜಗವ ಬೆಳಗುವುದದರ ಮೂಲತತ್ವ' ಎಂದು ವ್ಯಕ್ತಿತ್ವ ವಿಕಾಸದಿಂದ ಪ್ರಗತಿ ಸಾಧ್ಯ; ಪ್ರಜಾಪ್ರಭುತ್ವದ ಮೂಲ ತತ್ವವೂ ಇದೇ ಎಂದು ಪ್ರತಿಪಾದಿಸುತ್ತಾರೆ. ಅದೇ ಕಾಲದಲ್ಲಿ ಬರೆಯುತ್ತಿದ್ದ ಗೋಪಾಲಕೃಷ್ಣ ಅಡಿಗರೂ ಸಹ ಬಗೆಯೊಳಗನೇ ತೆರೆದು ತನ್ನ ನುಡಿಯೊಳೆ ಬರೆಯುವ ತವಕದಲ್ಲಿ 'ವ್ಯಕ್ತಿತ್ವ ವಿಕಾಸ' ವನ್ನೇ ಆಶಯವನ್ನಾಗಿಟ್ಟುಕೊಂಡು ಕಾವ್ಯ ರಚಿಸುತ್ತಿದ್ದರು. ಅವರಲ್ಲಿ ಈ ಆಶಯ ಕವಿತೆಯಿಂದ ಕವಿತೆಗೆ ಬೆಳೆಯುತ್ತ ಸಮಾಜದ ತುಳಿತಕ್ಕೆ ಸಿಕ್ಕಿ ತನ್ನ ಚಹರೆ ಕಳೆದುಕೊಳ್ಳುತ್ತಿರುವ ವ್ಯಕ್ತಿತ್ವವನ್ನು ರಕ್ಷಿಸಿ ತನ್ನಿಷ್ಟದಂತೆ ರೂಪಿಸಿಕೊಳ್ಳುವ ಇಷ್ಟದೇವತಾವಿಗ್ರಹದ ಅಸಲು ಕಸುಬಾಗಿ ಹೋರಾಟದ ಕಾವ್ಯವಾದರೆ, ಕಣವಿಯವರಲ್ಲಿ ಇದು ಅವರ ಬಹುಮುಖೀ ಆಸಕ್ತಿಗಳಲ್ಲೊಂದಾಗಿ ಮಾನವಾನುಭವದ, ಅಂತಃಕರಣ ಸಂಬಂಧವಾದ ಇತರ ವಲಯಗಳನ್ನೂ ಒಳಗೊಳ್ಳುವತ್ತ ಸಾಗಿತು. ಅಡಿಗರ ಕಾವ್ಯ ಆಳಕ್ಕಿಳಿದರೆ ಕಣವಿಯವರ ಕಾವ್ಯ ವಿಸ್ತಾರವನ್ನೂ ವೈವಿಧ್ಯವನ್ನೂ ಪಡೆಯಿತು. ಅಡಿಗರಲ್ಲಿ ಹೋರಾಟದ ಸಂಘರ್ಷ ಮುಖ್ಯವಾದರೆ, ಕಣವಿಯವರ ಕಾವ್ಯ ಸಂವಾದದ ಮಾತುಕತೆಯ ಮಾದರಿ ಹಿಡಿಯಿತು.

ಹಾಗೆ ನೋಡಿದರೆ, ಆಧುನಿಕ ಸಂವೇದನೆ ಸಂಘರ್ಷವನ್ನು, ಪ್ರತಿಭಟನೆಯನ್ನು, ಹೋರಾಟವನ್ನು ಸಾಹಿತ್ಯದ ಪ್ರಧಾನ ಲಕ್ಷಣವೆಂದು ಗುರ್ತಿಸಿಕೊಂಡಿದೆ. ಸಂಘರ್ಷವಿಲ್ಲದ ಸಾಹಿತ್ಯ ನೀರಸವೆಂಬುದು ಇವರ ನಿಲುವು. ಇಂತಹ ಸಂದರ್ಭದಲ್ಲಿ ಮೆಲುದನಿಯ ಕಣವಿಯವರ ಕಾವ್ಯ ಹೊಸ ಬಗೆಯ